ಇನ್ನೊಬ್ಬರಿಗೆ ಚಪ್ಪಲಿಯಿಂದ ಹೊಡೆದರೆ ಅದು ಬಾರೀ ಪ್ರಮಾದವಾಗಿ ಇನ್ನೊಬ್ಬನೂ ಮರಳಿ ಚಪ್ಪಲಿಯಿಂದ ಹೊಡೆಯಬಹುದು. ಬಾಯಿ ಮಾತಿನಿಂದ ಹೇಳಿದರೂ ಕೇಳಲಾಗದ ಉದ್ಧಟತನದ ವ್ಯಕ್ತಿಯನ್ನು ಕೊನೆಯ ಎಚ್ಚರಿಕೆಯಾಗಿ 'ನೋಡು ಸುಮ್ನೆ ಬಿಟ್ರೆ ಸರಿ, ಇಲ್ಲಾಂದ್ರೆ ಕಾಲಲ್ಲಿರುವುದನ್ನು ಕೈಗೆ ತೆಗೆದುಕೊಳ್ಳಬೇಕಾಗುತ್ತದೆ' ಎಂಬ ಅಬ್ಬರದ ನುಡಿಯು ವಿಕೋಪದ ಪರಾಕಾಷ್ಠೆ ಎಂದೇ ಅರ್ಥೈಸಬಹುದು.

ಹಳ್ಳಿಯ ಜನರು ಹೆಚ್ಚಾಗಿ ಚರ್ಮದ ಜೋಡುಗಳನ್ನು ಉಪಯೋಗಿಸುತ್ತಾರೆ. ಹೊಲ, ತೋಟ ಪಟ್ಟಿಗಳಲ್ಲಿ ಕೆಲಸ ಮಾಡುವಾಗ ಮುಳ್ಳುಗಳಿಂದ ಪಾದಗಳನ್ನು ರಕ್ಷಿಸಿಕೊಳ್ಳಲು ಇವು ಅನಿವಾರ್ಯವಾಗಿರುತ್ತವೆ. ಚರ್ಮದ ಹೊಸ ಚಪ್ಪಲಿಗಳಿಗೆ ಎಣ್ಣೆ ಸವರಿ ಮೆದುವಾಗಿಸಿ ಕಾಲಲ್ಲಿ ಹಾಕಿಕೊಳ್ಳುವುದುಂಟು. ಒಂದು ವೇಳೆ ಹಾಗೆ ಉಪಯೋಗಿಸಿದರೆ ಕಾಲಿಗೆ ಚರ್ಮನೆಟ್ಟು ಗಾಯವಾಗಿ ಕೆಲವು ದಿನ ನಡೆಯಲು ಕಷ್ಟವಾಗುತ್ತದೆ. ಈ ಸಂದರ್ಭದಲ್ಲಿ ನನ್ನ ಹೈಸ್ಕೂಲ್ ಜೀವನದ ಘಟನೆ ನೆನಪಾಗುತ್ತದೆ. ನನ್ನ ಸಹಪಾಠಿ ಅರ್ಜುನ ಎನ್ನುವವನು ಯಾವಾಗಲೂ ಚರ್ಮದ ಜೋಡು ಹಾಕಿಕೊಂಡು ಶಾಲೆಗೆ ಬರುತ್ತಿದ್ದ. ಹೊಸ ಚಪ್ಪಲಿ ತೆಗೆದುಕೊಂಡನೆಂದರೆ ಅವುಗಳಿಗೆ ಎಣ್ಣೆ ಮಜ್ಜನ ಮಾಡಿಸಿ, ನಾಲು ಬಡಿಸಿ ಕಾಲಲ್ಲಿ ಹಾಕಿಕೊಂಡು ಕ್ಲಾಸಿನಲ್ಲಿ ಬಂದರೆ ತೀರಿತು. ಶಾಂತವಾಗಿದ್ದ ತರಗತಿಯಲ್ಲಿ ನಾಲುಗಳು ಪರಸಿ ನೆಲಕ್ಕೆ ತಿಕ್ಕಿ, ಅವನು ನಡೆಯುವಾಗ ಚರಕ್... ಚರಕ್... ಸಪ್ಪಳವಾಗಿ ಎಲ್ಲ ಹುಡುಗರು ನಗುತ್ತಿದ್ದರು. ನಮ್ಮ ವಿಜ್ಞಾನ ಶಿಕ್ಷಕರಾದ ಎಸ್.ಎಸ್. ಪಾಟೀಲ ಎಂಬುವರಿಗೆ ಇದರಿಂದ ಪಾಠ ಮಾಡುವಾಗ ರಸಭಂಗವಾಗುತ್ತಿತ್ತು. 'ಏ ಅರ್ಜುನ, ನೀನು ನಾಳೆಯಿಂದ ಈ ಚಪ್ಪಲಿ ಬದ್ಲಿ ಮಾಡಿಕೊಂಡು ಬಾರಪಾ...' ಎಂದು ಮುಗುಳ್ನಗುತ್ತಲೇ ಹೇಳುತ್ತಿದ್ದರು. ಆಗ ಎಲ್ಲ ಹುಡುಗರು 'ಹೋ' ಎಂದು ಕೂಗುತ್ತಿದ್ದರು. ಆ ಸಮಯದಲ್ಲಿ ಅರ್ಜುನ ಒಂದಿಷ್ಟು ಬಜೀಲಿಯಾಗಿ ಡೆಸ್ಕಗಳ ನಡುವಿನ ದಾರಿಯಲ್ಲಿ ಹಾಯ್ದು ಹಿಂದಿನ ಸೀಟಿನಲ್ಲಿ ಆಸೀನನಾಗುತ್ತಿದ್ದುದು ನೆನೆದರೆ ಈಗಲೂ ನನಗೆ ನಗೆ ಬರುತ್ತದೆ!

ದೇವಸ್ಥಾನಗಳಿಗೆ ಹೋದಾಗ ನಮ್ಮ ಚಪ್ಪಲಿಗಳು ಬದಲಿ ಆಗಿ ಬಿಡಬಹುದು. ಇಲ್ಲವೆ ಕಳೆದೂ ಹೋಗಬಹುದು. ಜೋಡು ಕದಿವ ಕಾಯಕ ಮಾಡಿಕೊಂಡವರು ಜನರ ಚಲನವಲನಗಳನ್ನು ದೂರದಿಂದಲೇ ಗಮನಿಸಿ, ಚಪ್ಪಲಿಗಳು ಹೊಸದಾಗಿದ್ದರೆ ಅಥವಾ ಹೆಚ್ಚು ಬೆಲೆಯುಳ್ಳವುಗಳಾಗಿದ್ದರೆ ಅವುಗಳನ್ನು ಕದ್ದು ಬೇರೆ ಕಡೆಗೆ ಒಯ್ದು ಮಾರಾಟ ಮಾಡಿ ಹಣಗಳಿಸುತ್ತಾರೆ. ಇಂಥವರಿಂದ ಭಕ್ತಾದಿಗಳಿಗೆ ಸಂರಕ್ಷಣೆ ಒದಗಿಸಲು ಪಾದರಕ್ಷಕ ದಳ ಹುಟ್ಟಿಕೊಂಡಿವೆ. ಬಂದ ಜನರ ಪಾದರಕ್ಷೆಗಳನ್ನು ವಶಕ್ಕೆ ಪಡೆದು ಗುರುತಿಗಾಗಿ ಒಂದು ಸಣ್ಣ ಬಿಲ್ಲೆ ಕೊಡುತ್ತಾರೆ. ಮರಳಿ ಆ ಬಿಲ್ಲೆಯನ್ನು ಪಾದರಕ್ಷಣಾ ದಳದವರಿಗೆ ಕೊಟ್ಟರೆ ಚಪ್ಪಲಿಗಳನ್ನು ಹಿಂದಿರುಗುಸುತ್ತಾರೆ. ಕೆಲವು ಸ್ವಯಂ ಸೇವಾ ಸಂಸ್ಥೆಗಳು ಸೇವಾ ಮನೋಭಾವನೆಯಿಂದ ಉಚಿತವಾಗಿ ಜೋಡು ಕಾಯವ ಕಾಯಕ ಮಾಡುತ್ತಿರುತ್ತವೆ. ಇಂಥ ಸೇವೆ ಇಲ್ಲವಾದಲ್ಲಿ ನಮ್ಮ ಜೋಡು ರಕ್ಷಣೆಯ ಜವಾಬ್ದಾರಿ ನಮ್ಮ ಮೇಲೆಯೇ ಇರುತ್ತದೆ.



ಕಳೆದ ಯುಗಾದಿಗೆ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಯಾತ್ರೆಗೆಂದು ಮಿತ್ರರೊಂದಿಗೆ ಹೋಗಿದ್ದೆ. ಮಲ್ಲಿಕಾರ್ಜುನ